
ಪುಸ್ತಕ ಪರಿಚಯ

# ಸುಮಧುರ ಶೈಲಿಯ ರಾಮಾಯಣ ಕೃತಿ




*ಕೃತಿ* : **ಜನಪ್ರಿಯ ಶ್ರೀ ವಾಲ್ಮೀಕಿ ರಾಮಾಯಣ**
*ಲೇಖಕರು* : **ಹುರಗಲವಾಡಿ ಲಕ್ಷ್ಮೀನರಸಿಂಹ ಶಾಸ್ತ್ರಿ**
*ಪ್ರಕಾಶಕರು* : **ನವಭಾರತೀ ಪ್ರಕಾಶನ**
**ಸರಸ್ವತಿಪುರಂ, ಮೈಸೂರು – 570009**
*ಪುಟಗಳು* : **349** *ಬೆಲೆ* : **200/-**

ವಾಲ್ಮೀಕಿ ಮಹರ್ಷಿಯ ರಾಮಾಯಣವನ್ನು ಗದ್ಯರೂಪದಲ್ಲಿ ನಿರೂಪಿಸುವ ಅನೇಕ ಗ್ರಂಥಗಳು ಕನ್ನಡದಲ್ಲಿ ಪ್ರಕಟವಾಗಿವೆ. ಆದರೆ ಕಥನಶೈಲಿ, ನಿರೂಪಣೆಯ ಬಗೆ, ರಾಮಾಯಣದ ಆದರ್ಶ–ಮೌಲ್ಯಗಳ ಅಭಿವ್ಯಕ್ತಿ ಈ ಎಲ್ಲ ದೃಷ್ಟಿಗಳಿಂದ ಸಮಗ್ರವೂ, ಸರ್ವಾಂಗ ಸುಂದರವೂ ಆದ ಒಂದು ಕೃತಿ ಮೂಡಿಬಂದಿದೆಯೇ ಎಂದು ಕೇಳಿದರೆ, 'ಅಂಥ ಕೃತಿಯನ್ನು ಯಾರಾದರೂ ರಚಿಸಬೇಕು' ಎಂಬ ಉತ್ತರ ದೊರೆತೀತು. ಜನಜೀವನದ ಎಲ್ಲ ಸ್ತರದವರಿಗೂ ರುಚಿಸುವಂತೆ, ವಿದ್ವಜ್ಜನರಿಗೂ ಪಾಮರರಿಗೂ ಮಕ್ಕಳಿಗೂ ಹಿತವಾಗುವಂತೆ, ಶ್ರದ್ಧಾಳುಗಳಾದ ಆಸ್ತಿಕರಿಗೂ ಸಾಹಿತ್ಯಾಸಕ್ತ ರಸಿಕರಿಗೂ ಸಮಾನವಾಗಿ ಉಪಯುಕ್ತವಾಗುವಂತೆ ಒಂದು ಉತ್ತಮ ರಾಮಾಯಣ ಗದ್ಯಕೃತಿಯ ಅಗತ್ಯವೇನೋ ಇದ್ದೇ ಇದೆ. ಶ್ರೀ ಎ.ಆರ್.ಕೃಷ್ಣಶಾಸ್ತ್ರಿಗಳ 'ವಚನ ಭಾರತ'ದಂತೆ ಸಮಸ್ತ ಕನ್ನಡಿಗರೂ ಆದರಿಸುವಂತಹ ಒಂದು ರಚನೆ ರಾಮಾಯಣವನ್ನು ಕುರಿತು ಈವರೆಗೆ ರಚಿತವಾಗಿಲ್ಲವೆಂದೇ ಹೇಳಬೇಕಾಗಿದೆ. ಶ್ರೀ ಲ.ನ. ಶಾಸ್ತ್ರೀ ಅವರ ಹೊಸ ಕೃತಿ **'ಜನಪ್ರಿಯ ಶ್ರೀ ವಾಲ್ಮೀಕಿ ರಾಮಾಯಣ'** ಗ್ರಂಥವು ಈ ಕೊರತೆಯನ್ನು ತುಂಬುವ ಕೃತಿಯೆನ್ನಬೇಕು.

ಮೂಲ ವಾಲ್ಮೀಕಿಯ ರಾಮಾಯಣವು ಅಷ್ಟೊಂದು ಜನಮನ್ನಣೆ ಗಳಿಸಲು ಅನೇಕ ಕಾರಣಗಳನ್ನು ಗುರುತಿಸಬಹುದು; ಎಲ್ಲಕ್ಕಿಂತ ಹೆಚ್ಚಾಗಿ, ಮನ ಮುಟ್ಟುವಂತಹ ಸುಲಲಿತವಾದ, ಸೌಂದರ್ಯಪೂರ್ಣವಾದ ಶೈಲಿ ಅದರದು. ಪ್ರಸ್ತುತ ಕೃತಿಯ ಕನ್ನಡ ಭಾಷೆಯನ್ನು ನೋಡುವಾಗ ಈ ಅಂಶ ಪದೇ ಪದೇ ಮನಸ್ಸಿಗೆ ಬರುತ್ತದೆ. ಸಂಕ್ಷಿಪ್ತವೂ, ಸುಮಧುರವೂ, ಎಷ್ಟು ಬೇಕೋ ಅಷ್ಟರ ಮಟ್ಟಿಗೆ ಸಂಭಾಷಣಾತ್ಮಕವೂ ಆದ ಕಥನ ಶೈಲಿ ಇಲ್ಲಿನದು. ಕಥೆಯ ಓಟಕ್ಕೆ ಧಕ್ಕೆಯಾಗದಂತೆ ಸಂಕ್ಷೇಪವೂ ಅಲ್ಲದ, ವಿಸ್ತಾರವೂ ಅಲ್ಲದ ಕಾವ್ಯಸೌಂದರ್ಯದ ಅಂಶಗಳಿಂದ ಕೂಡಿರುವ ವರ್ಣನೆಗಳು ಇಲ್ಲಿವೆ.

ಅದೇರೀತಿ, ಹಳೆಯ ಕಾಲದ ಕಥೆಯಾದ್ದರಿಂದ ಪುರಾತನ ಚಿತ್ರಣವನ್ನು ನೀಡಲು ಅಗತ್ಯವಾದ ಪರಂಪರಾಗತ ಸಂಸ್ಕೃತಮಯ ಪದಪುಂಜಗಳ ಬಳಕೆ, ಸಾಂಸ್ಕೃತಿಕ ಪರಿಸರವನ್ನು ಸೃಷ್ಟಿಸಲು ಯೋಗ್ಯವಾದ ರೀತಿಯಲ್ಲಿ ಮೂಡಿಬಂದಿದೆ. ಆದರೆ ಎಲ್ಲೂ ಸಂಸ್ಕೃತ ಪದಗಳು ಭಾರವೆನಿಸಿಲ್ಲ, ಬದಲಾಗಿ ಕಥೆಗೆ ಶೋಭೆಯನ್ನು ನೀಡುತ್ತವೆ. ಅಷ್ಟೇ ಅಲ್ಲ, ಆಡುಮಾತುಗಳ ಸೊಗಡು ಹಲವೆಡೆ ಭಾಷೆಗೆ ನಾವೀನ್ಯತೆಯನ್ನೂ ನೀಡುತ್ತವೆ. ಸುಂದರ ಕಾಂಡದಲ್ಲಿ ಹನುಮಂತನು ಅಶೋಕ ವನವನ್ನು ಕಂಡ ಸಂದರ್ಭ ಇದಕ್ಕೆ ಒಂದು ಉತ್ತಮ ಉದಾಹರಣೆ : ''ಅದು ವಸಂತ ಋತುವಿನ ಆರಂಭ ಕಾಲ. ಅಶೋಕವನವು ನಾನಾ ಬಗೆಯ ಸುಗಂಧ ಪುಷ್ಪಗಳಿಂದ ಮನೋಹರವಾಗಿತ್ತು. ಆಂಜನೇಯನು ಆ ವನದ ಪ್ರಾಕಾರಕ್ಕೆ ನೆಗೆದು, ಒಂದು ಮಾವಿನ ತೋಪಿನಲ್ಲಿ ಇಳಿದನು. ಗಿಡಗಳಲ್ಲಿ ಹೂಗಳು ಚಿಗಿತು, ಸುತ್ತಲೂ ಕಂಪನ್ನು ಬೀರುತ್ತಿದ್ದುವು. ಗಿಡಗಳಲ್ಲಿ ಮಲಗಿ ನಿದ್ರಿಸುತ್ತಿದ್ದ ಪಕ್ಷಿಗಳು ಆಂಜನೇಯನು ನೆಗೆದ ರಭಸದಿಂದ ಗಾಬರಿಗೊಂಡು, ಎಚ್ಚರಗೊಂಡವು. ಅವು ಸ್ವಲ್ಪ ಕಾಲ ಸುತ್ತಲೂ ಹಾರಾಡಿದುವು. ಇನ್ನೂ ಮಲಗದೇ ಇದ್ದ ಕೆಲವು ಮೃಗಪಕ್ಷಿಗಳು ಅಲ್ಲಲ್ಲಿ ಅಡ್ಡಾಡುತ್ತಿದ್ದುವು. ಆ ವನದಲ್ಲಿ ಅಲ್ಲಲ್ಲಿ ಜಲಾಶಯಗಳು, ಅವುಗಳಲ್ಲಿ ನೈದಿಲೆ, ತಾವರೆ ಬಳ್ಳಿಗಳೂ ಹರಡಿದ್ದುವು. ಅಲ್ಲಲ್ಲಿ ವಿಹಾರಕ್ಕೆ, ವಿಶ್ರಾಂತಿಗೆ ಮಂಟಪಗಳು ನಿರ್ಮಿತವಾಗಿದ್ದುವು. ಅಲ್ಲೆಲ್ಲಾ ಸುತ್ತಾಡುತ್ತ, ದೊಡ್ಡದಾದ ಶಿಂಶುಪಾ ವೃಕ್ಷವನ್ನು ನೋಡಿದನು. ಅದರ ಮೇಲೆ ಕುಳಿತು ಸೀತೆಗಾಗಿ ಕಣ್ಣು ಹಾಯಿಸಿದನು...''

ಎಲ್ಲರಿಗೂ ಹಿತವೆನಿಸುವ ಕಥನಶೈಲಿಯಿದು. ರಾಮಾಯಣ ಕಥೆಯು ಮನಃಪಟಲದಲ್ಲಿ ಅಚ್ಚೊತ್ತಿ ನಿಲ್ಲಲು ಸಹಾಯಕವಾಗುವಂತೆ ಅಲ್ಲಲ್ಲಿ ರೇಖಾಚಿತ್ರಗಳು (ಇವು ಇನ್ನಷ್ಟು ಇರಬೇಕಿತ್ತು ಅನಿಸುತ್ತವೆ), ಕೆಲವು ಸಂಸ್ಕೃತ ಶ್ಲೋಕಗಳೊಂದಿಗೆ ಅವುಗಳ ಅನುವಾದ, ಈ ಕೃತಿಯ ಸೊಬಗನ್ನು ಹೆಚ್ಚಿಸಿವೆ. ಐತಿಹಾಸಿಕ ವಿವರಗಳನ್ನು ನೀಡುವ ಲೇಖಕರ ಮುನ್ನುಡಿ ಅರ್ಥಪೂರ್ಣವಾಗಿದೆ. ಪ್ರಾಚೀನ ಕಾಲದ ಶಾಸ್ತ್ರೀಯ ಗ್ರಂಥಗಳ ಬಗ್ಗೆ ಅಸಡ್ಡೆ ಇರುವ 'ಆಧುನಿಕ'ರೆಲ್ಲರೂ ಇದನ್ನು ಒಂದು ಬಾರಿ ಓದಿ ನೋಡಬೇಕು; ಆಗ ಅವರಿಗೆ ನಮ್ಮ ಪರಂಪರೆಯ ಸತ್ವ, ಸಾಹಿತ್ಯಕೃತಿಗಳ ಸೌಂದರ್ಯ, ಧಾರ್ಮಿಕ–ಸಾಂಸ್ಕೃತಿಕ ಮೌಲ್ಯಗಳ ಹಿಂದಿರುವ ಆಧ್ಯಾತ್ಮಿಕ ಶ್ರೀಮಂತಿಕೆ ಮನವರಿಕೆಯಾಗದಿರದು.